ಆಗಿ ಅನೇಕ ಸಲ ಇದರ ಬಗ್ಗೆ ಹೇಳಿದ್ದೇನೆ. 18 ವರ್ಷಗಳ ಹಳೆಯ ಈ ಕೆರೆಯ ಬಗ್ಗೆ ಕಳೆದ 3 ವರ್ಷದಿಂದ ಪ್ರಶ್ನೆ ಕೇಳುತ್ತಿದ್ದೇನೆ. 7 ಅಥವಾ 8 ಲಕ್ಷ ರೂಪಾಯಿ ಅಂದಾಜಿನ ಈ ಕೆರೆ ಇವತ್ತು 34 ಲಕ್ಷ ರೂಪಾಯಿಗೆ ಬಂದು ನಿಂತಿದೆ. ಇವತ್ತು ಕೊರಟಗೆರೆ ತಾಲ್ಲೂಕಿನ ಜನರಿಗೆ ನೀರಿಗೆ ಬಹಳ ತೊಂದರೆ ಇದ್ದು ಈ ಕಾರ್ಯ ಆದಷ್ಟು ಮುಗಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಡಾ|| ಆರ್.ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವುದು ನಿಜ. ಕಳೆದ 16 ವರ್ಷಗಳ ಹಿಂದೆ ಕೆಲಸ ಪ್ರಾರಂಭ ಆಗಿದೆ. ಆದರೆ ಇದುವರೆಗೂ ಕೂಡ ಪೂರ್ತಿ ಆಗಿಲ್ಲ. ಆದರೆ ಈ ಕೆರೆಯನ್ನು ನಮ್ಮ ಇಲಾಖೆಗೆ 1992ರಲ್ಲಿ ವಹಿಸಲಾಗಿದೆ. 1993-94ರಲ್ಲಿ ನಾನು ಇದಕ್ಕೆ 2 ಲಕ್ಷ ರೂಪಾಯಿ ಅನುದಾನ ಕೊಟ್ಟಿದ್ದೇನೆ. ಈಗ 1994-95ರಲ್ಲಿ ಆದ್ಯತೆ ಮೇರೆಗೆ ಅನುದಾನ ಒದಗಿಸಿ ಆದಷ್ಟು ಜಾಗ್ರತೆ ಪೂರ್ತಿ ಮಾಡಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಸಿ. ವೀರಭದ್ರಯ್ಯ : ಕೆರೆ 2 ಕಡೆ ಆಗಿದೆ. ಹಳ್ಳದ ಭಾಗ ಮಾತ್ರ ಆಗಿದೆ. ಅಧಿಕಾರಿಗಳು ಮನಸ್ಸು ಮಾಡಿದರೆ 2 ತಿಂಗಳಲ್ಲಿ ಮುಗಿಸಬಹುದು. ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಒತ್ತಾಯ ಮಾಡಿದೆ. ಆಗ ಇದೇ ಉತ್ತರ ಬಂತು. ಆ ಜನರಿಗೆ ನೀರಿನ ಅವಶ್ಯಕತೆ ಇದೆ. ಆದ್ದರಿಂದ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ|| ಆರ್.ಬಿ ಚೌಧರಿ : ನಾನು ಇರಕಸಂದ್ರಕ್ಕೆ ಬಂದಿದ್ದಾಗ ತಾವು ಈ ಸಮಸ್ಯೆ ನನಗೆ ತಿಳಿಸಿದ್ದಿರಿ. ಆಗ ಈ ಕೆರೆ ನಮ್ಮ ಇಲಾಖೆಗೆ ವರ್ಗಾಯಿಸಲ್ಪಟ್ಟಿತ್ತು. ಆಗಲೇ ನಮ್ಮ ಅಧಿಕಾರಿಗಳಿಗೆ ಈ ಬಗ್ಗೆ ನೋಡಿಕೊಂಡು ಬರಲು ಆಜ್ಞೆ ಮಾಡಿದೆ. ಈಗಾಗಲೇ ಅವರು ನೋಡಿಕೊಂಡು ಬಂದು ಒಂದು ನಕ್ಷೆ ತಯಾರು ಮಾಡಿದ್ದಾರೆ. ಯಾವ ರೀತಿ ಬೇಗ ಮಾಡಬಹುದೆಂದು. ಈ ದಿಸೆಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಗುಲ್ಬರ್ಗಾ ನಗರದಲ್ಲಿರುವ ನೀರಾವರಿ ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರಕ್ಕೆ ಸ್ಥಳಾಂತರ

205 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ನಗರದಲ್ಲಿರುವ ಮೂರು ಸಣ್ಣ ನೀರಾವರಿ ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರ ಸ್ಥಾನಕ್ಕೆ ಶೀಘ್ರವಾಗಿ ಸ್ಥಳಾಂತರಿಸಲು ಕ್ರಮ ತೆಗೆದು ಕೊಳ್ಳಲಾಗುವುದೆಂದು ಉತ್ತರ ನೀಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ನಗರದಲ್ಲಿ ಸಣ್ಣ ನೀರಾವರಿ ಉಪವಿಭಾಗದ ಕಾರ್ಯಾಲಯ ಮೂರರಲ್ಲಿ ಒಂದನ್ನು ಸ್ಥಳಾಂತರಿಸಲು ಪರ್ಯಾಯ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿದೆಯೇ?

ಇ) ಸೇಡಂ ನಗರ ಉಪವಿಭಾಗ, ಸೇಡಂಗೆ ಗುಲ್ಬರ್ಗಾ ನಗರದಲ್ಲಿರುವ ಮೂರು ಸಣ್ಣ ನೀರಾವರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ಉಪವಿಭಾಗ) ಕಾರ್ಯಾಲಯಗಳಲ್ಲಿ ಒಂದು ಉಪವಿಭಾಗವನ್ನು ಸ್ಥಳಾಂತರಿಸಿ ಈ ಭಾಗದ ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳನ್ನು ನಿರ್ವಹಿಸಲು ಅನುಕೂಲ ಮಾಡಿ ರೈತರಿಗೆ ನೀರಾವರಿ ಅನುಕೂಲ ಯಾವಾಗ ಮಾಡಿಕೊಡಲಾಗುವುದು?

ಅ) ಇಲ್ಲ - ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಾಗಿ ಮಾತ್ರ ಉತ್ತರ ನೀಡಿದೆ.

ಆ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಈ ಬಗ್ಗೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ನಗರದ ಮೂರು ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರ ಸ್ಥಾನಕ್ಕೆ ಶೀಘ್ರ ಸ್ಥಳಾಂತರಿಸಬೇಕೆಂದು ಕೇಳಿದ ಪ್ರಶ್ನೆಗೆ, ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಾಗಿ ಮಾತ್ರ ಉತ್ತರ ನೀಡಲಾಗಿದೆ ಎಂದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು, ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಉತ್ತರ ನೀಡಿದ್ದೀರಿ. ಸೇಡಂ ಕಂದಾಯ ಉಪವಿಭಾಗವಾಗಿ ಮೊದಲು ಸಣ್ಣ ನೀರಾವರಿ ಉಪವಿಭಾಗ ಎಂದು ಇದ್ದು 6-7 ವರ್ಷಗಳ ಮೊದಲು ಇದನ್ನು ಸ್ಥಳಾಂತರಿಸಲಾಯಿತು. ಈ ಭಾಗದಲ್ಲಿ ಹೆಚ್ಚು ಹೆಚ್ಚು ಕೆಲಸ ಇರುವ ಕಾರಣ ಈಗಾಗಲೇ ಕಾರ್ಯನಿರ್ವಾಹಕ ಅಭಿಯಂತರರು, ಗುಲ್ಬರ್ಗ - ಇವರು ಪತ್ರ ಬರೆದು ಮೂರು ಸಣ್ಣನೀರಾವರಿ ಉಪವಿಭಾಗಗಳು ಗುಲ್ಬರ್ಗಾದಲ್ಲಿ ಇದ್ದು ಅದರಲ್ಲಿ ಒಂದನ್ನು ಸೇಡಂಗೆ ಸ್ಥಳಾಂತರಿಸಲು 18.3.93ರಂದೇ ಶಿಫಾರಸ್ಸು ಮಾಡಿರುವುದು ನಿಜವೇ? ಒಂದು ವೇಳೆ ಶಿಫಾರಸ್ಸು ಮಾಡಿದ್ದರೆ ಇಲ್ಲಿಯವರೆಗೆ ವಿಳಂಬ ಮಾಡಿದ್ದು ಏಕೆ?

ಡಾ|| ಆರ್.ಬಿ. ಚೌಧರಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸೇಡಂ ಸಬ್ ಡಿವಿಜನ್ ಬೇಕಾಗಿದೆ ಎಂದಿದ್ದಾರೆ. ಆ ಸಬ್ಡಿವಿಜನ್ನಲ್ಲಿ ವಿನಾದರೂ ವರ್ಕ್ ಲೋಡ್ ಹೆಚ್ಚು ಇದ್ದರೆ ನಾನು ಕೊಟ್ಟೇ ಕೊಡುತ್ತೇನೆ ಎಂದು ಭರವಸೆ ಕೊಡುತ್ತೇನೆ. ಹೆಚ್ಚಿನ ಕೆಲಸ ಸೇಡಂ ಸಬ್ಡಿವಿಜನ್ನಲ್ಲಿ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಒಂದು ವೇಳೆ ನಿಜವಾದರೆ ಪರಿಶೀಲನೆ ಮಾಡಿ ತ್ವರಿತವಾಗಿ ಸಬ್ಡಿವಿಜನ್ ಕೊಡುತ್ತೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಹೆಚ್ಚುಹೆಚ್ಚು ಕೆಲಸ ಈಗಾಗಲೇ ಇದೆ ಎಂದು ಕಾರ್ಯನಿರ್ವಾಹಕ ಅಭಿಯಂತರರು ತನಿಕಾ ವರದಿಯನ್ನು ಕಳುಹಿಸಿದ್ದಾರೆ. ಆ ಭಾಗದ ಜನರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಮಾರ್ಚ್ ತಿಂಗಳ ಒಳಗೆ ಸ್ಥಳಾಂತರಿಸಿ ಅವರಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ.

ಡಾ|| ಆರ್.ಬಿ. ಚೌಧರಿ: ಕೊಡುತ್ತೇವೆಂದು ಹೇಳಿದ್ದರೂ ಸುತ್ತಿ ಬಳಸಿ ಅವರು ಮತ್ತೆ ಅದನ್ನೇ ಕೇಳುತ್ತಿದ್ದಾರೆ.

1993-94ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಕಾಮಗಾರಿ ಕೆಲಸಕ್ಕೆ ಹಣ ಬಿಡುಗಡೆ

152 - ಶ್ರೀ ಜಿ.ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖಾವತಿಯಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು?

ಆ) ಅವುಗಳಿಗೆ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹೊಳೆನರಸೀಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.